# ವರ್ಚುವಲ್ ಜಗತ್ತಿನಲ್ಲಿ ಸಹಜತೆ ಗೌಣ



ಪ್ರೀತಿಯ ಪರಿಕಲ್ಪನೆ ಪ್ರತಿಯೊಬ್ಬರಲ್ಲೂ ಬೇರೆಬೇರೆಯಾಗಿರುತ್ತದೆ. ಮನುಕುಲದ ಆದಿಯಿಂದಲೂ, ಪ್ರೀತಿಯಿತ್ತು. ಈಗಲೂ ಇದೆ. ಮುಂದೆಯೂ ಇರುವುದು. ಆದರೆ ಕಾಲ ಕಾಲಕ್ಕೆ ಪ್ರೇಮ ನಿವೇದನೆಯ ಬಗೆಗಳು ಬದಲಾಗುತ್ತಿವೆ. ಮೊದಲು ಕಣ್ಸನ್ನೆಯಲ್ಲಿ, ಪತ್ರಮುಖೇನ, ಸ್ನೇಹಿತರ ಮೂಲಕ ಇಲ್ಲವೇ ನೇರವಾಗಿ ಬಂದು ಮಂಡಿಯೂರಿ ಪ್ರೇಮ ನಿವೇದನೆಗಳಾಗುತ್ತಿದ್ದವು. ಸಂವಹನ ಮಾಧ್ಯಮ ಇಂದಿನಷ್ಟು ಆಧುನಿಕವಾಗಿಲ್ಲದ್ದರಿಂದ, ತಮ್ಮ ಪ್ರಿಯತಮೆ ಇಲ್ಲವೇ ಪ್ರಿಯಕರನಿಗೆ ತಮ್ಮ ಪ್ರಣಯದ ಬಗೆಗಿನ ಮನಸ್ಸಿನ ತುಡಿತ, ಭಾವನೆಗಳನ್ನು ವ್ಯಕ್ತಪಡಿಸಲು ಬಹಳಷ್ಟು ಕಾಯಬೇಕಾಗಿತ್ತು. ಆ ಕಾಯುವಿಕೆಯಲ್ಲಿಯೇ ಒಂದು ರೀತಿಯ ಖುಷಿಯನ್ನನುಭವಿಸುತ್ತಿದ್ದರು.

ಆದರಿಂದು, ಪ್ರೇಮ ನಿವೇದನೆಯು ಬೆರಳ ತುದಿಯಲ್ಲಿರುವುದು. ಮಿಂಚಂಚೆ, ವಾಟ್ಸ್ಆ್ಯಪ್, ಟೆಲಿಗ್ರಾಮ್‌ಗಳ ಮೂಲಕ ಮನಸ್ಸನಲ್ಲಿ ಬಂದ ಕ್ಷಣವೇ ಭಾವನೆಯನ್ನು ವ್ಯಕ್ತಪಡಿಸಬಹುದು. ಅದಕ್ಕೆ ಅನೇಕ ಇಮೋಜಿಗಳು, ಗ್ರೀಟಿಂಗ್‌ಗಳು, ಮೀಮ್‌ಗಳು ಸಹಾಯ ಮಾಡುತ್ತವೆ. ತತ್‌ಕ್ಷಣದ ಸಂತೃಪ್ತಿಗಾಗಿ ಮುಂದಾಲೋಚನೆಯಿಲ್ಲದೆ ಮಾಡುವಂತಹ ನಿವೇದನೆಗಳು ಶಾಶ್ವತವಾದ ಸಂಬಂಧಗಳಿಗೆ ನಾಂದಿ ಹಾಡಲಿಕ್ಕಿಲ್ಲ. ಪ್ರೀತಿಯು ಇತ್ತೀಚೆಗೆ ವಾಟ್ಸ್ಆ್ಯಪ್ ಸಂದೇಶವಾಗಿಯೋ ಇಲ್ಲವೇ ಇನ್‌ಸ್ಟಾಗ್ರಾಮ್‌ನ ಸ್ಟೋರಿಯಾಗಿಯೋ ಹೆಚ್ಚಾಗಿ ಹರಿದಾಡುತ್ತಿದೆ.

ಒಬ್ಬ ವ್ಯಕ್ತಿಯನ್ನು ಪ್ರೀತಿಸಲು ಅನೇಕ ಕಾರಣಗಳಿರುತ್ತವೆ. ಬಾಹ್ಯ ಸೌಂದರ್ಯ, ಅಂಗ ಸೌಷ್ಠವ, ವ್ಯಕ್ತಿತ್ವ, ಸ್ವಭಾವ ಇನ್ನೂ ಅನೇಕ ಅಂಶಗಳು ಈ ವಿಷಯವನ್ನು ನಿರ್ಧರಿಸುತ್ತವೆ. ಇದಕ್ಕೆ ಸಾಕಷ್ಟು ಸಮಯವೂ ಬೇಕಾಗಬಹುದು. ಆದರೆ ಇಂದು, ಒಬ್ಬ ವ್ಯಕ್ತಿಯ ಬಗ್ಗೆ ತಿಳಿದುಕೊಳ್ಳಲು ಸರಳವಾಗಿ ಲಭ್ಯವಿರುವ ಸಾಮಾಜಿಕ ಮಾಧ್ಯಮಗಳ ಮೊರೆಹೋಗುವುದು ಸಹಜ. ಆದರೆ ಸಾಮಾಜಿಕ ಮಾಧ್ಯಮದಲ್ಲಿ ವ್ಯಕ್ತಿಯು ತನ್ನ ವ್ಯಕ್ತಿತ್ವದ ಒಂದು ನೋಡಿದ ಹೆಣ್ಣು ಗಂಡುಗಳನ್ನೇ ಕಣ್ಮುಚ್ಚಿಕೊಳ್ಳುವ ಕಾಲವಂತೂ ಇದಲ್ಲ. ಅಥವಾ ಕಾಡಿನಲ್ಲೋ, ಗಾರ್ಡನ್ನಿನಲ್ಲೋ ತನ್ನನ್ನು ಕಂಡು ಮೋಹಿಸಿದವನ ಕೈಗೆ ತನ್ನ ಬಾಳನ್ನು ಇಟ್ಟು ಪುನೀತಳಾಗುವ ಭ್ರಮೆಯಲ್ಲಿ ಇಂದಿನ ಹೆಣ್ಣು ಖಂಡಿತ ಇಲ್ಲ.

ಈ ಕಾಲದ ಪ್ರೇಮದ ಪರಿಯೇ ಬೇರೆ. ಹಾಗಾಗಿ ಅದರ ಭ್ರಮೆಗಳೂ ಅಷ್ಟೇ ಬೇರೆ. ಮೆಟ್ರೋ ರೈಲಿನಲ್ಲಿ, ಮೊಬೈಲ್ ಪರದೆಯ ಮೇಲೆ ಬಿಡುವಿಲ್ಲದೇ ಕುಟ್ಟುತ್ತಿರುವ ಹುಡುಗ 'ಶಿಟ್' ಒಮ್ಮೆ ಸಣ್ಣಗೇ ಕಾಲಪ್ಪಳಿಸಿದ್ದು ವಾಟ್ಸ್ಆ್ಯಪ್‌ನೊಳಗೆ ಮನಸು ಮುರಿದುಕೊಂಡಿದ್ದರ ಸೂಚನೆ ಇರಬಹುದು. ಶೇರಿಂಗ್ ಕ್ಯಾಬ್‌ನಲ್ಲಿ ಕಿವಿಗೆ ಇಯರ್‌ಫೋನ್ ಹಾಕಿಕೊಂಡು ತನಗೇ ಕೇಳದಷ್ಟು ಸಣ್ಣಗೇ ಮಾತಾಡುತ್ತಿರುವ ಹುಡುಗಿಯ ಕಣ್ಣಂಚಲ್ಲಿನ ನೀರು ಅವಳ ಪ್ರೇಮಕ್ಕೆ ನೀಡುತ್ತಿರುವ ತಿಲಾಂಜಲಿಯೂ ಆಗಿರಬಹುದು. ಫೇಸ್‌ಬುಕ್‌ನಲ್ಲಿ ಪರಸ್ಪರ ಸಂಬಂಧವೇ ಇಲ್ಲದಂತಿರುವವರು ಅದರ ಕೆಳಮನೆಯಂತಿರುವ ಮೆಸೆಂಜರಿನಲ್ಲಿ ಹೃದಯ ಬದಲಿಸಿಕೊಂಡು ಖಾತೆ ಮಾಹಿತಿಯಲ್ಲಿ 'ಮ್ಯಾರಿಡ್ ವಿತ್...' ಎಂದು ಬರೆದು ಅಚ್ಚರಿ ಮೂಡಿಸಬಹುದು. ಒಂದು ಲೈಕ್, ಒಂದು ಕಮೆಂಟ್, ಒಂದೇ ಒಂದು ಇಮೋಜಿ ಬದುಕನ್ನೇ ಜಟಿಲಗೊಳಿಸುವ ಸಾಧ್ಯತೆ ಇರುವ ಕಾಲವಿದು.

## ಬದಲಾಗಿದ್ದು ಕಾಲವೇ, ನಾವೇ?

ಬದಲಾಗಿರುವುದು ಪ್ರೇಮದ ಪರಿಯಾ ಅಥವಾ ಪರಿಕರಗಳಷ್ಟೇನಾ? ಈ ಕುರಿತು ಹಳಬರನ್ನು ಕೇಳಿದರೆ 'ಒರಳುಕಲ್ಲಿನಲ್ಲಿ ರುಬ್ಬಿ ಮಾಡಿದ ಅಡುಗೆಯ ರುಚಿ ಮಿಕ್ಸಿಯಲ್ಲಿ ರುಬ್ಬಿದಾಗ ಬರಲು ಸಾಧ್ಯವೇ ಇಲ್ಲ' ಎನ್ನುತ್ತಾರೆ. ಅದಕ್ಕೆ ವಿರುದ್ಧವಾಗಿ 'ರುಚಿ ತುಸು ಬದಲಾಗಬಹುದು; ಹಾಗಂತ ಮೊದಲಿನ ರುಚಿಯೇ ಶ್ರೇಷ್ಠ ಎನ್ನುವುದು ಹಳಹಳಿಕೆಯಷ್ಟೇ' ಎನ್ನುವವರೂ ಇದ್ದಾರೆ.

ಪ್ರೇಮದ ದಾರಿಗಳು ಸುಲಭವಾಗುತ್ತಿರುವ ಹಾಗೆಯೇ ಭಗ್ನಪ್ರೇಮಗಳೂ ಹೆಚ್ಚುತ್ತಿವೆ. ದಾಂಪತ್ಯದ ಕಟ್ಟುಪಾಡುಗಳು ಕಡಿಮೆಯಾಗುತ್ತಿರುವ ಹಾಗೆಯೇ ವಿಚ್ಛೇದನಗಳೂ ಹೆಚ್ಚುತ್ತಿವೆ. ವ್ಯಕ್ತಿಸ್ವಾತಂತ್ರ್ಯದ ಸೀಮೆಗಳು ನಿಚ್ಚಳಗೊಳ್ಳುತ್ತಿರುವ ಹಾಗೆಯೇ ಕುಟುಂಬದ ಪರಿಕಲ್ಪನೆಗಳೂ ಕರಗುತ್ತಿವೆ. ಇದರಲ್ಲಿ ಯಾವುದು ಸರಿ, ಯಾವುದು ತಪ್ಪು ಎಂದು ಹೇಳುವುದು ಸುಲಭವೂ ಅಲ್ಲ. ಮತ್ತು ಹಾಗೆ ತೀರ್ಪು ನೀಡಿದಾಕ್ಷಣ ಪರಿಸ್ಥಿತಿ ಬದಲಾಗುವುದೂ ಇಲ್ಲ.

ಬೇಕೋ ಬೇಡವೋ ಬದಲಾವಣೆಯ ಪ್ರವಾಹದಲ್ಲಿ ಸಿಕ್ಕಾಗಿದೆ. ವಿಚ್ಛೇದನಗಳು ಹೆಚ್ಚುತ್ತಿವೆ ಎಂಬುದಕ್ಕೆ ಆಧುನಿಕತೆಯಷ್ಟೇ ಕಾರಣವಾಗಿರಲಿಕ್ಕಿಲ್ಲ. ಹಿಂದೆ ವಿಚ್ಛೇದನದ ಆಯ್ಕೆಯೂ ಇರಲಿಲ್ಲ. ಹಾಗಾಗಿ ಸತ್ತುಹೋದ 'ಪ್ರೇಮ'ದ ಹೆಣವನ್ನು ಹೊತ್ತು ಜೀವನವಿಡೀ ಬದುಕಬೇಕಾದ ಪರಿಸ್ಥಿತಿ ಇತ್ತು. ಇಂದು ಆ ದರ್ದನ್ನು ಪ್ರೇಮ ಮೀರಿದೆ. ಹಾಗೆಂದ ಮಾತ್ರಕ್ಕೆ ಪ್ರೇಮ ಬದಲಾಗಿದೆ ಎಂದು ಅರ್ಥವೇ? ಮನುಷ್ಯ ಎಷ್ಟೇ ಯಂತ್ರದ ದಾಸನಾಗಿದ್ದರೂ ಸಂಗಾತಿಯನ್ನು ಕಾಣುವ, ಮೋಹಿಸುವ, ಸ್ಪರ್ಶಿಸಲು ಬಯಸುವ ಅವನ ಮನಸ್ಸು ಬದಲಾಗಿಲ್ಲ ಅಲ್ಲವೇ? ವಾಟ್ಸ್ ಆ್ಯಪ್‌ನಲ್ಲಿ, ಹಾಳೆಯ ಅಕ್ಷರಗಳಲ್ಲಿನ ಅಭಿವ್ಯಕ್ತಿ ಸಾಧ್ಯವಿಲ್ಲದೇ ಇರಬಹುದು. ಆದರೆ ಇಂದಿನ ಕಾಲಕ್ಕೆ ತಕ್ಕ ಭಾವವಿನಿಮಯವನ್ನು ಈಗಿನ ಇಮೋಜಿಗಳೂ ಮಾಡುತ್ತಿರಬಹುದಲ್ಲವೇ? ಮೊದಲ ಪ್ರೇಮಪತ್ರ ಬರೆದು ಉತ್ತರಕ್ಕಾಗಿ ಕಾಯುತ್ತಿದ್ದ ಹುಡುಗ/ಗಿಯ ಮನದ ತಳಮಳಗಳಿಗೂ, 'ಲವ್ ಯೂ' ಎಂದು ಎರಡಕ್ಷರ ವಾಟ್ಸ್ ಆ್ಯಪ್‌ನಲ್ಲಿ ಕಳುಹಿಸಿ ಅದು 'ಗ್ರೀನ್ ಟಿಕ್' ಆಗುವ ಗಳಿಗೆಗೆ ಕಾಯುವ, 'ಟೈಪಿಂಗ್' ಎಂಬ ಸೂಚನೆ ಮೂಡಿದಾಕ್ಷಣ ಅವನ ಮನಸಲ್ಲಿ ಮೂಡುವ ಉದ್ವೇಗಕ್ಕೂ ಮೂಲತಃ ವ್ಯತ್ಯಾಸವಿದೆಯೇ?

ನದಿಯಲ್ಲಿ ಹರಿಯುತ್ತಿರುವ ನೀರು ಪ್ರತಿಕ್ಷಣ ಬದಲಾಗುತ್ತಿರುತ್ತದೆ; ಆದರೆ ನದಿ ಹಾಗೆಯೇ

